# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.
ದೂರವಾಣಿ:080-23378375-80, ಇ-ಮೇಲ್:souharda@souharda.coop

ಸಂಖ್ಯೆ : ಸಾಮಾನ್ಯ ಸಭೆ/01/2017-18 ದಿನಾಂಕ: 26.08.2017

**ರಾಜ್ಯದ ಎಲ್ಲಾ ಅರ್ಹ ಸೌಹಾರ್ದ ಸಹಕಾರಿಗಳಿಗೆ**

ಮಾನ್ಯರೇ,

ವಿಷಯ : 16ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಕುರಿತು.

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು **ದಿನಾಂಕ 16 ಸೆಪ್ಟೆಂಬರ್ 2017, ಶನಿವಾರದಂದು ಬೆಳಿಗ್ಗೆ 11.00 ಗಂಟೆಗೆ ಕಿಂಗ್ಸ್ ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಂಗಳೂರು-560080 ಇಲ್ಲಿ ನಡೆಯಲಿದೆ.** ಸಭೆಯ ನೋಟಿಸನ್ನು, ಟಿಪ್ಪಣಿಗಳನ್ನು ಹಾಗೂ ಪ್ರಸ್ತಾವಿತ ಉಪವಿಧಿ ತಿದ್ದುಪಡಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಪ್ರತಿವರ್ಷ ನೋಟೀಸಿನ ಜೊತೆಯಲ್ಲಿ ಲೆಕ್ಕಪರಿಶೋಧನಾ ವರದಿ, ವಾರ್ಷಿಕ ವರದಿ ಇತ್ಯಾದಿ ಎಲ್ಲಾ ಲಗತ್ತುಗಳನ್ನು ಒಟ್ಟಾಗಿ ಮುದ್ರಿಸಿ, ನೋಟೀಸಿನ ಜೊತೆಯಲ್ಲಿ ಕಳುಹಿಸಲಾಗುತ್ತಿತ್ತು. ಪ್ರಸಕ್ತ ವರ್ಷ, ಅನಿವಾರ್ಯ ಕಾರಣದಿಂದ ಮುದ್ರಣ ವಿಳಂಬವಾಗಿದ್ದು, ಅವುಗಳನ್ನು 31.08.2017 ರೊಳಗೆ ಎಲ್ಲಾ ಸಹಕಾರಿಗಳಿಗೆ ಕಳುಹಿಸಲಾಗುವುದು. ಸಾಮಾನ್ಯ ಸಭೆಯ ವಿಷಯಪಟ್ಟಿಯಲ್ಲಿ ಉಪವಿಧಿ ತಿದ್ದುಪಡಿ ವಿಷಯ ಇರುವ ಕಾರಣದಿಂದ ಕಾಯ್ದೆಯನುಸಾರ 20 ಪೂರ್ಣ ದಿನಗಳ ಮೊದಲು ನೋಟೀಸ್ ಕಳುಹಿಸಬೇಕಿದ್ದು, ಆ ಕಾರಣದಿಂದ ನೋಟೀಸನ್ನು, ಟಿಪ್ಪಣಿಗಳನ್ನು ಹಾಗೂ ಪ್ರಸ್ತಾವಿತ ಉಪವಿಧಿ ತಿದ್ದುಪಡಿಯನ್ನು ಇಂದೇ ಕಳುಹಿಸಲಾಗುತ್ತಿದೆ. ದಯವಿಟ್ಟು ಎಲ್ಲಾ ಸಹಕಾರಿಗಳು ಸಹಕರಿಸಲು ಕೋರಿದೆ.

ವಂದನೆಗಳೊಂದಿಗೆ,

Karnataka State Souharda Federal Co-operative Ltd
Reg. No.
RSR / SOU / ACT / 136 /
Regn. 051 / 2001-02
dated: 04-01-2002
* Bangalore *

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

26 ಆಗಸ್ಟ್ 2017

## 16ನೇ ವಾರ್ಷಿಕ ಸಾಮಾನ್ಯ ಸಭೆ
## 16 ಸೆಪ್ಟೆಂಬರ್ 2017

ಮಾನ್ಯರೇ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು **16 ಸೆಪ್ಟೆಂಬರ್ 2017, ಶನಿವಾರದಂದು** ಕಿಂಗ್ಸ್ **ಕೋರ್ಟ್, ಗೇಟ್ ಸಂಖ್ಯೆ 5, ಅರಮನೆ ಆವರಣ, ಬಳ್ಳಾರಿ ರಸ್ತೆ, ಬೆಂಗಳೂರು-560080 ಇಲ್ಲಿ ಬೆಳಿಗ್ಗೆ 11.00** ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

ಈ ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:

1. 16ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 15ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.
3. 2016-17ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವುದು.
4. 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಹಾಗೂ ಅನುಪಾಲನಾ ವರದಿಯನ್ನು ಅನುಮೋದಿಸುವುದು.
5. 2016-17ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
6. 2017-18ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
7. 2017-18ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
8. 2018-19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
9. 2018-19ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.
10. 2017-18ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
11. 2017-18 ಮತ್ತು 2018-19ನೇ ಸಾಲುಗಳಿಗೆ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
12. ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯ ವರದಿ ಮತ್ತು ಲೆಕ್ಕಪತ್ರಗಳ ಅನುಮೋದನೆ.
13. ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯ ಕುರಿತು.
14. ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.
15. ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಿಸುವ ಕುರಿತು.
16. ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.
17. ನೂತನವಾಗಿ ಸೇರ್ಪಡೆಗೊಂಡ ಸದಸ್ಯರ ಪರಿಗಣನೆ.
18. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

Karnataka State Souharda Federal Co-operative Ltd. Reg. No. RSR / SOU / ACT / 136 / Regn. 051 / 2001-02 dated: 04-01-2002 Bangalore

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ**
'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

# 16ನೇ ವಾರ್ಷಿಕ ಸಾಮಾನ್ಯ ಸಭೆ
# 16 ಸೆಪ್ಟೆಂಬರ್ 2017

<u>ಟಿಪ್ಪಣಿಗಳು</u>

**ವಿಷಯ 1: 16ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.**

**ಟಿಪ್ಪಣಿ:** ದಿನಾಂಕ 26 ಆಗಸ್ಟ್ 2017ರಂದು ಕಳುಹಿಸಿದ 16ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡಬಹುದಾಗಿದೆ.

**ವಿಷಯ 2: 15ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸುವುದು.**

**ಟಿಪ್ಪಣಿ:** ದಿನಾಂಕ 24 ಆಗಸ್ಟ್ 2016 ರಂದು ಬೆಂಗಳೂರಿನಲ್ಲಿ ನಡೆದ 15ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ದಿನಾಂಕ 22.09.2016ರಂದು ಈಗಾಗಲೇ ಕಳುಹಿಸಲಾಗಿದೆ. ಅದಕ್ಕೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ 31.10.2016ರೊಳಗೆ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಲಿಖಿತವಾಗಿ ಕಳುಹಿಸಲು ಸೂಚಿಸಲಾಗಿತ್ತು. ಯಾವುದೇ ಸಹಕಾರಿಯೂ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 15ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸಬಹುದಾಗಿದೆ.

**ವಿಷಯ 3: 2016-17ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವುದು.**

**ಟಿಪ್ಪಣಿ:** 2016-17ನೇ ಸಾಲಿನ ಸಂಯುಕ್ತ ಸಹಕಾರಿಯ ವಾರ್ಷಿಕ ವರದಿಯನ್ನು ಈ ನೋಟೀಸಿನೊಂದಿಗೆ ನೀಡಿದ್ದು, ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 4: 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಹಾಗೂ ಅನುಪಾಲನಾ ವರದಿಯನ್ನು ಅನುಮೋದಿಸುವುದು.**

**ಟಿಪ್ಪಣಿ:** ಈ ನೋಟೀಸಿನೊಂದಿಗೆ ಸನ್ನದು ಲೆಕ್ಕಪರಿಶೋಧಕರಾದ ಮೆ. ರಾಕ್‌ಛಾಂಪ್ಸ್ & ಕೋ. ಬೆಂಗಳೂರು ಇವರು ನೀಡಿದ ಲೆಕ್ಕಪರಿಶೋಧನಾ ವರದಿಯನ್ನು ಯಥಾವತ್ತಾಗಿ (Scaned Copy) ಹಾಗೂ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 5: 2016-17ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.**

**ಟಿಪ್ಪಣಿ:** 2016-17ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ (ಆಡಳಿತ, ಇ-ಸ್ಟಾಂಪಿಂಗ್ ಮತ್ತು ಶಿಕ್ಷಣ ವಿಭಾಗಗಳ ಒಟ್ಟು ಮೊತ್ತ) ಕೆಲವು ಶೀರ್ಷಿಕೆಗಳಡಿ ಹೆಚ್ಚಿನ ವೆಚ್ಚವಾಗಿರುವುದನ್ನು ಹಾಗೂ ಅದಕ್ಕೆ ಕಾರಣಗಳನ್ನು ನೀಡಲಾಗಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 6: 2017-18ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

**ಟಿಪ್ಪಣಿ:** ಈ ನೋಟೀಸಿನೊಂದಿಗೆ ನೀಡಲಾದ 2017-18ನೇ ಸಾಲಿನ ಸಂಯುಕ್ತ ಸಹಕಾರಿಯ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 7: 2017-18ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.**

**ಟಿಪ್ಪಣಿ:** 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿತವಾದ 2017-18ನೇ ಸಾಲಿನ ಮುಂಗಡ ಪತ್ರವನ್ನು 2016-17ನೇ ಸಾಲಿನ ಆರ್ಥಿಕ ವರದಿಗಳು ಹಾಗೂ 2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಆಧಾರದಲ್ಲಿ ಪರಿಷ್ಕರಿಸಲಾಗಿದ್ದು, ಅದನ್ನು ಈ ನೋಟೀಸಿನೊಂದಿಗೆ ನೀಡಲಾಗಿದೆ. ಅದನ್ನು ಪರಿಶೀಲಿಸಿ, ಅನುಮೋದಿಸಬಹುದಾಗಿದೆ.

**ವಿಷಯ 8: 2018–19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.**

**ಟಿಪ್ಪಣಿ:** ಈ ನೋಟೀಸಿನೊಂದಿಗೆ ನೀಡಲಾದ, ಸಂಯುಕ್ತ ಸಹಕಾರಿಯ 2018–19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸಬಹುದಾಗಿದೆ.

**ವಿಷಯ 9: 2018–19ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.**

**ಟಿಪ್ಪಣಿ:** ಈ ನೋಟೀಸಿನೊಂದಿಗೆ ನೀಡಲಾದ, ಸಂಯುಕ್ತ ಸಹಕಾರಿಯ 2018–19ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸಬಹುದಾಗಿದೆ.

**ವಿಷಯ 10: 2017–18ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

**ಟಿಪ್ಪಣಿ:** 2017–18ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಂದನ್ನು ನೇಮಕ ಮಾಡಬಹುದಾಗಿದೆ. ಹಾಗೂ ಅವರಿಗೆ ನೀಡಬಹುದಾದ ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಸ್ಥಳ | ಅನುಭವ | ಶ್ರೇಣಿ |
|---|---|---|---|---|
| 1. | ಮೆ. ಎಂ.ಎಸ್.ಕಾಮತ್ | ಬೆಂಗಳೂರು | 34 ವರ್ಷ | ಎ |
| 2. | ಮೇ. ನಾರಾಯಣ ಭಟ್ & ಕಂ. | ಬೆಂಗಳೂರು | 27 ವರ್ಷ | ಎ |
| 3. | ಮೆ. ಅನಂತ ಹೆಚ್ ಮುತಾಲಿಕ್ | ಬೆಂಗಳೂರು | 22 ವರ್ಷ | ಎ |

**ವಿಷಯ 11: 2017–18 ಮತ್ತು 2018–19ನೇ ಸಾಲುಗಳಿಗೆ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

**ಟಿಪ್ಪಣಿ:** 2017–18 ಮತ್ತು 2018–19ನೇ ಸಾಲುಗಳಿಗೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಈ ಕೆಳಗಿನ ಸಂಸ್ಥೆಗಳಲ್ಲಿ ಒಂದನ್ನು ನೇಮಕ ಮಾಡಬಹುದಾಗಿದೆ. ಹಾಗೂ ಅವರಿಗೆ ನೀಡಬಹುದಾದ ಸಣಭಾವೆಯನ್ನು ನಿಗದಿಪಡಿಸಬಹುದಾಗಿದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಸ್ಥಳ | ಅನುಭವ | ಶ್ರೇಣಿ |
|---|---|---|---|---|
| 1. | ಮೆ. ಮಧುಕರ ಹೆಗಡೆ & ಕಂ. | ಬೆಂಗಳೂರು | 20 ವರ್ಷ | ಎ |
| 2. | ಮೆ. ಎಂ.ಎಸ್.ಬಾಲಸುಬ್ರಮಣ್ಯಂ | ಬೆಂಗಳೂರು | 14 ವರ್ಷ | ಎ |
| 3. | ಮೆ. ಪುರಾಣಿಕ್ & ಹೆಬ್ಬಾರ್ | ಬೆಂಗಳೂರು | 13 ವರ್ಷ | ಬಿ |

**ವಿಷಯ 12: ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯ ವರದಿ ಮತ್ತು ಲೆಕ್ಕಪತ್ರಗಳ ಅನುಮೋದನೆ.**

**ಟಿಪ್ಪಣಿ:** ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯಾದ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಎಸ್‌ಎಪಿ–ಕೆ)ದಿಂದ 2016–17ನೇ ಸಾಲಿನಲ್ಲಿ ಯಾವುದೇ ಚಟುವಟಿಕೆಗಳು ನಡೆದಿರುವುದಿಲ್ಲ. ಸನ್ನದು ಲೆಕ್ಕಪರಿಶೋಧಕರಾದ ಮೆ. ರಾಕ್‌ಛಾಂಪ್ಸ್ & ಕೋ. ಬೆಂಗಳೂರು ಇವರು ನೀಡಿದ ಸದರಿ ಸಂಸ್ಥೆಯ ಲೆಕ್ಕಪರಿಶೋಧಿತವಾದ ಆರ್ಥಿಕ ತಃಖ್ತೆಗಳನ್ನು ಈ ನೋಟೀಸಿನೊಂದಿಗೆ ನೀಡಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಎಸ್‌ಎಪಿ–ಕೆ) ವನ್ನು 2006 ರಲ್ಲಿ ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯದಂತೆ ಆರಂಭಿಸಿದ್ದು, ಮೈಸೂರು ವಿಶ್ವವಿದ್ಯಾಲದಯ ಸಹಯೋಗದಲ್ಲಿ ಎಂಬಿಎ ತರಗತಿಗಳನ್ನು ಆರಂಭಿಸಲಾಯಿತು. ಆ ನಂತರದಲ್ಲಿ ಮೈಸೂರು ವಿಶ್ವವಿದ್ಯಲಯವು ಒಪ್ಪಂದದ ಕೆಲವು ಕರಾರುಗಳನ್ನು ಪರಿಷ್ಕರಿಸಲು ಸೂಚಿಸಿದ ಕಾರಣ, ಎಂಬಿಎ ತರಗತಿಗಳನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ. 2010 ಫೆಬ್ರುವರಿಯಲ್ಲಿ ಎಮಬಿಎ ತರಗತಿಗಳು ಮುಕ್ತಾಯವಾಗಿವೆ. ಆ ನಂತರದಲ್ಲಿ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ–ಕರ್ನಾಟಕ (ಎಸ್‌ಎಪಿ–ಕೆ) ದಿಂದ ಯಾವುದೇ ಚಟುವಟಿಕೆಗಳನ್ನು ನಡೆಸುತ್ತಿರುವುದಿಲ್ಲ.

ಇದನ್ನು ಟ್ರಸ್ಟ್ ಕಾಯ್ದೆಯಡಿ ನೋಂದಣಿ ಮಾಡಿದ್ದು, ಕಾಯ್ದೆಯನುಸಾರ ಪ್ರತಿವರ್ಷ ಲೆಕ್ಕಪರಿಶೋಧನೆ ನಡೆಸಲಾಗುತ್ತಿದೆ. ಪ್ರಸ್ತುತ ರೂ.736,930/– ನಷ್ಟದಲ್ಲಿ ಇರುತ್ತದೆ. ಸಂಸ್ಥೆಯನ್ನು ಮುಂದುವರೆಸುವ ಯಾವುದೇ ಅಗತ್ಯ ಇಲ್ಲದಿರುವ ಕಾರಣ ಇದನ್ನು ಸಮಾಪನೆ ಮಾಡುವುದು ಸೂಕ್ತವೆಂದು ಆಡಳಿತ ಮಂಡಲಿಯು

ಅಭಿಪ್ರಾಯ ಪಟ್ಟಿದ್ದು, ಈ ಕುರಿತು ಸಹ ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 13: ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯ ಕುರಿತು.**

**ಟಿಪ್ಪಣಿ:** ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯು ದಿನಾಂಕ 28.07.2017ರಂದು ನಡೆದು ನೂತನ ಮಂಡಲಿಯು ರಚನೆಯಾಗಿರುತ್ತದೆ. ಪದಾವಧಿಗಳ ಚುನವಣೆಯು ದಿನಾಂಕ 14.08.2017 ರಂದು ನಡೆದಿರುತ್ತದೆ. ಶ್ರೀ ಬಿ. ವೆಂಕಟೇಶ ರವರು ರಿಟರ್ನಿಂಗ್ ಅಧಿಕಾರಿಗಳಾಗಿ ಚುನಾವಣೆಯನ್ನು ನಡೆಸಿಕೊಟ್ಟಿರುತ್ತಾರೆ.ಚುನಾವಣಾ ಫಲಿತಾಂಶವನ್ನು ಎಲ್ಲಾ ಸಹಕಾರಿಗಳಿಗೆ ಈಗಾಗಲೇ ಕಳುಹಿಸಲಾಗಿರುತ್ತದೆ.

ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಪ್ರಕ್ರಿಯೆಗಳಿಗಾಗಿ ರೂ.18,71,053/- ವೆಚ್ಚ ಉಂಟಾಗಿರುತ್ತದೆ. ಸಹಕಾರ ಚುನಾವಣಾ ಪ್ರಾಧಿಕಾರ ಮತ್ತು ಅಪೆಕ್ಸ್ ಸಂಸ್ಥೆಗಳ ಚುನಾವಣಾಧಿಕಾರಿಗಳಿಂದ ಆಗಿರುವ ವೆಚ್ಚ ಇದರಲ್ಲಿ ಸೇರಿರುವುದಿಲ್ಲ. ಚುನಾವಣೆ ವಿಳಂಬವಾಗಿರುವ ಕಾರಣ ಒಟ್ಟಾರೆ ವೆಚ್ಚ ಹೆಚ್ಚಾಗಿರುತ್ತದೆ. ಇದನ್ನು ಅನುಮೋದಿಸಬಹುದಾಗಿದೆ.

**ವಿಷಯ 14: ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.**

**ಟಿಪ್ಪಣಿ:** ಸಂಯುಕ್ತ ಸಹಕಾರಿಯ ಹಿಂದಿನ ಎರಡು ವರ್ಷಗಳ ಕ್ರಿಯಾ ಯೋಜನೆಗಳಲ್ಲಿ ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು ಹೇಳಲಾಗಿದ್ದು, ಇದು ಸಾಮಾನ್ಯ ಸಭೆಯಿಂದ ಅನುಮೋದಿತವಾಗಿರುತ್ತದೆ. ಈ ಕುರಿತು ಈಗಾಗಲೇ, ಜೆನಿತ್, ಪಿಯೋಸಿಟ್, ಪ್ರೋಸೆಸ್‌ವೇರ್, ಸೇರಿದಂತೆ 20ಕ್ಕೂ ಹೆಚ್ಚು ಸಾಫ್ಟ್‌ವೇರ್ ಪೂರೈಕೆದಾರರ ಜೊತೆ ಚರ್ಚಿಸಲಾಗಿದೆ. ಸಾಫ್ಟ್‌ವೇರ್ ಪೂರೈಕೆದಾರರ ಹೆಸರನ್ನು ಅಂತಿಮಗೊಳಿಸಿ, ಅವರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಎರಡು ರೀತಿಯ ಟೆಂಡರ್ ಪ್ರಕ್ರಿಯೆ ನಡೆಸಬೇಕಿರುತ್ತದೆ. ಮೊದಲನೆಯದು ಟೆಕ್ನಿಕಲ್ ಬಿಡ್ ಹಾಗೂ ಎರಡನೆಯದು ಹಣಕಾಸು ಬಿಡ್. ಟೆಕ್ನಿಲ್ ಬಿಡ್ ನಲ್ಲಿ ಅರ್ಹತೆ ಗಳಿಸಿದವರು ಮಾತ್ರ ಹಣಕಾಸು ಬಿಡ್ ನಲ್ಲಿ ಭಾಗವಹಿಸಲು ಅರ್ಹರಾಗುತ್ತಾರೆ. ಹಾಗೂ ನಂತರದಲ್ಲಿ, ಆಸಕ್ತ ಪೂರೈಕೆದಾರರಿಂದ ಅರ್ಜಿ ಆಹ್ವಾನಿಸಿ, ಟೆಕ್ನಿಕಲ್ ಬಿಡ್ ಕರೆದು, ಅರ್ಹರ ಪಟ್ಟಿಯನ್ನು ತಯಾರಿಸಿ ಅವರುಗಳಿಮದ ಹಣಕಾಸು ಬಿಡ್ ನಡೆಸಿ, ಸಾಮಾನ್ಯ ಸಭೆಯ ಅನುಮೋದನೆ ಪಡೆದು ಜಾರಿಗೊಳಿಸುವ ಕುರಿತು ಚರ್ಚಿಸಿ ಸೂಕ್ತವಾಗಿ ನಿರ್ಣಯಿಸಬಹುದಾಗಿದೆ.

**ವಿಷಯ 15: ಸಂಯುಕ್ತ ಸಹಕಾರಿಯ ಸ್ವಂತ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಿಸುವ ಕುರಿತು.**

**ಟಿಪ್ಪಣಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದಕ್ಕೆ ಮಲ್ಲೇಶ್ವರದ ಮಾರ್ಗೋಸಾ ರಸ್ತೆಯಲ್ಲಿ ಸಂಯುಕ್ತ ಸಹಕಾರಿಯು ಹೊಂದಿರುವ 7020 ಚದರ ಅಡಿಯ ನಿವೇಶನದಲ್ಲಿ ಒಂದು ಸುಸಜ್ಜಿತವಾದ ಕಟ್ಟಡವನ್ನು ಕಟ್ಟುವ ಉದ್ದೇಶದಿಂದ ಆಡಳಿತ ಮಂಡಲಿಯು ನೀಲಿನಕ್ಷೆಯನ್ನು ಸಿದ್ಧಪಡಿಸಲು ದೇಸಾಯಿ ಕನ್ಸಟ್ರಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆಗೆ ಆದೇಶ ನೀಡಿದ್ದು, ನೀಲಿ ನಕ್ಷೆಯ ವಿವರಗಳನ್ನು ಸಭೆಯ ಸಂದರ್ಭದಲ್ಲಿ ಪ್ರಸ್ತುತಪಡಿಸಲಾಗುವುದು. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಿ, ನಿರ್ಣಯಿಸಿರುವಂತೆ ಸದರಿ ನಿವೇಶನದಲ್ಲಿ -1, -2 ಕೆಳ ಅಂತಸ್ತುಗಳು, ನೆಲಮಹಡಿ ಹಾಗೂ +4 ಮಹಡಿಗಳ ಒಟ್ಟು 5 ಅಂತಸ್ತುಗಳ ಕಟ್ಟಡವನ್ನು ಕಟ್ಟಲು ಯೋಜಿಸಲಾಗಿದೆ.

-1, -2ನ ಕೆಳಮಹಡಿಗಳಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆಯನ್ನು, ನೆಲಮಹಡಿಯಲ್ಲಿ ಮತ್ತು ಮೊದಲನೇ ಮಹಡಿಯಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಮತ್ತು ವಿಭಾಗೀಯ ಕಛೇರಿಗಳು ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಕೊಠಡಿ (Court Hall), 2ನೇ ಮಹಡಿಯಲ್ಲಿ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಕೊಠಡಿಗಳು, ಆಡಳಿತ ಮಂಡಲಿ ಸಭಾಂಗಣ (Board Room), 3ನೇ ಮಹಡಿಯಲ್ಲಿ ತರಬೇತಿಗಾಗಿ ಒಂದು ಸುಸಜ್ಜಿತವಾದ ಸಭಾಂಗಣ (Auditorium) ಅನ್ನು ನಿರ್ಮಿಸುವುದು, 4ನೇ ಮಹಡಿಯಲ್ಲಿ ಅತಿಥಿ ಗೃಹವನ್ನು ಮತ್ತು ಮೇಲ್ಛಾವಣಿಯಲ್ಲಿ ಅಡುಗೆ ಕೋಣೆ, ವಾಹನ ಚಾಲಕರು ತಂಗಲು ಕೊಠಡಿ ಮತ್ತು ಭೋಜನಾಲಯ (ಊಟಿಟಿಂ ಊಚಿಟಟ) ನಿರ್ಮಿಸಲು ಯೋಜಿಸಲಾಗಿದೆ.

ದೇಸಾಯಿ ಕ್ರಿಯೇಟಿವ್ ಕನ್‌ಸ್ಟ್ರಕ್ಷನ್ಸ್ ಇವರು ನಿಯೋಜಿತ "ಸೌಹಾರ್ದ ಭವನ"ದ ಕಟ್ಟಡವನ್ನು ನಿರ್ಮಿಸಲು ರೂ.7,50,00,000/-ಗಳ (ಏಳು ಕೋಟಿ ಐವತ್ತು ಲಕ್ಷಗಳ) ಮೊತ್ತದ ಅಂದಾಜು ಬಜೆಟ್ ಅನ್ನು ನೀಡಿರುತ್ತಾರೆ.

ಇಡೀ ಕಟ್ಟಡದ ವಿಸ್ತೀರ್ಣವು (Built up Area) ಒಟ್ಟಾರೆಯಾಗಿ 35,000 ಚದರ ಅಡಿ ಇರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಭವನದ ಮುಖ ಚಿತ್ರಣವನ್ನು ಹಾಗೂ ಎಲ್ಲಾ ಅಂತಸ್ತುಗಳ ವಿವರಗಳನ್ನು ಸಾಮಾನ್ಯ ಸಭೆಯ ಸಂದರ್ಭದಲ್ಲಿ ವಿವರವಾಗಿ ಪ್ರದರ್ಶಿಸಲಾಗುವುದು. ಸದರಿ ಭವನದ ನಿರ್ಮಾಣಕ್ಕೆ ತಮ್ಮ ಸಲಹೆ/ ಮಾರ್ಗದರ್ಶನಗಳೇನಾದರೂ ಇದ್ದಲ್ಲಿ ಸಾಮಾನ್ಯ ಸಭೆಯ ಮುಂಚಿತವಾಗಿ ಪತ್ರದ ಮೂಲಕ/ souharda@souharda.coop ಗೆ ಇ-ಮೇಲ್ ಕಳುಹಿಸುವುದರ ಮೂಲಕ ತಿಳಿಸಲು ಕೋರಿದೆ.

**ಆರ್ಥಿಕ ವಿವರ :** ಸಂಯುಕ್ತ ಸಹಕಾರಿಯು ಸದರಿ ನಿವೇಶನವನ್ನು ಖರೀದಿಸುವ ಸಂದರ್ಭದಲ್ಲಿ ಇ-ಸ್ಟ್ಯಾಂಪಿಂಗ್ ವಿಭಾಗದ ಸುರಕ್ಷಾ ಠೇವಣಿಯಲ್ಲಿ ರೂ.5,80,00,000/-ಗಳನ್ನು ಹಾಗೂ ಸಂಯುಕ್ತ ಸಹಕಾರಿಯ ಸಂಪನ್ಮೂಲಗಳಿಂದ ರೂ.4,00,00,000/-ಗಳನ್ನು ಮತ್ತು ರೂ.2,00,00,000/-ಗಳನ್ನು ಸಾಲ ಪಡೆಯುವುದರ ಮೂಲಕ ಖರೀದಿಸಲಾಗಿತ್ತು. ಪ್ರಸ್ತುತ ಇ-ಸ್ಟ್ಯಾಂಪಿಂಗ್ ವಿಭಾಗದ ಸುರಕ್ಷಾ ಠೇವಣಿ ರೂ.5,80,00,000/- ಹಾಗೂ ಸಾಲ ಪಡೆದಿದ್ದ ರೂ.2,00,00,000/- ಮೊತ್ತಗಳನ್ನು ಸಂಯುಕ್ತ ಸಹಕಾರಿಯ ಸಂಪನ್ಮೂಲದಿಂದ ಮರು ಪಾವತಿಸಲಾಗಿದೆ. ಸದರಿ "ಸೌಹಾರ್ದ ಭವನ"ವನ್ನು ಸಹಕಾರಿಗಳು ನೀಡುವ ದೇಣಿಗೆಯಿಂದ ಹಾಗೂ ಸಂಯುಕ್ತ ಸಹಕಾರಿಯಲ್ಲಿರುವ ಸಂಪನ್ಮೂಲದಿಂದ ಮತ್ತು ಅಗತ್ಯವಿದ್ದಲ್ಲಿ ಸಾಲ ಪಡೆದುಕೊಳ್ಳುವುದರ ಮೂಲಕ ನಿರ್ಮಾಣ ಮಾಡಲು ಯೋಜಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೌಹಾರ್ದ ಭವನದ ಕಟ್ಟಡವನ್ನು ನಿರ್ಮಿಸಲು ಅನುಮತಿ ಹಾಗೂ ಕಟ್ಟಡಕ್ಕೆ ತಗಲುವ ಖರ್ಚು-ವೆಚ್ಚಗಳನ್ನು ಅನುಮೋದಿಸಲು ಸಾಮಾನ್ಯ ಸಭೆಗೆ ವಿಷಯವನ್ನು ಮಂಡಿಸಲಾಗಿದೆ.

**ವಿಷಯ 16: ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.**

**ಟಿಪ್ಪಣಿ:** ಸಂಯುಕ್ತ ಸಹಕಾರಿಯ ಕಾರ್ಯ ವಿಸ್ತರವಾಗಿದೆ. ಹಾಗೂ ಸದಸ್ಯರ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಲಿದ್ದು, ಸಂಯುಕ್ತ ಸಹಕಾರಿಯ ಎಲ್ಲಾ ಕಾರ್ಯಗಳನ್ನು ಕೇಂದ್ರೀಕೃತವಾಗಿ ನಿರ್ವಹಿಸಲು ಕಷ್ಟವಾಗಿಗುತ್ತಿದೆ. ಈ ಹಿನ್ನಲೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಅಗತ್ಯವಾಗಿದೆ. ಮಂಡಲಿ/ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ಪ್ರತ್ಯಾಯೋಜನೆ ಹಾಗೂ ಕಾರ್ಯಕಾರಿ ಸಮಿತಿ ರಚನೆ ಉದ್ದೇಶದಿಂದ ಹಾಗೂ ಕೇಂದ್ರ ಕಾಯ್ದೆಯಲ್ಲಿನ ತಿದ್ದುಪಡಿ ಕಾರಣದಿಂದ ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ಕೆಲವು ತಿದ್ದುಪಡಿಯನ್ನು ಮಾಡುವ ಅವಶ್ಯಕತೆ ಇದ್ದು, ಕರಡನ್ನು ಲಗತ್ತಿಸಿದೆ. ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 17: ನೂತನವಾಗಿ ಸೇರ್ಪಡೆಗೊಂಡ ಸದಸ್ಯರ ಪರಿಗಣನೆ.**

**ಟಿಪ್ಪಣಿ:** 2016-17ನೇ ಸಾಲಿನಲ್ಲಿ ನೂತನವಾಗಿ 424 ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸದಸ್ಯರಾಗಿ ಸೇರ್ಪಡೆಯಾಗಿರುತ್ತಾರೆ. ಅಂತಹ ಸಹಕಾರಿಗಳ ಹೆಸರುಗಳನ್ನು ನೀಡಿದೆ. ಇದನ್ನು ಪರಿಗಣಿಸಬಹುದಾಗಿದೆ.

**ವಿಷಯ 18: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.**

**ಟಿಪ್ಪಣಿ:** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯವನ್ನು ಚರ್ಚಿಸಲು ಇಚ್ಛಿಸುವವರು ದಿನಾಂಕ 09.09.2017ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ಕಛೇರಿಗೆ ವಿಷಯದ ವಿವರ ಸಹಿತ ಕೋರಿಕೆ ಸಲ್ಲಿಸತಕ್ಕದ್ದು. ಅದರಂತೆ ಯಾರಾದರೂ ಕೋರಿಕೆ ಸಲ್ಲಿಸಿದಲ್ಲಿ ಸಾಮಾನ್ಯ ಸಭೆಯ ವೇಳೆಗೆ ಪ್ರತ್ಯೇಕವಾದ ಟಿಪ್ಪಣಿ ನೀಡಲಾಗುವುದು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ

Karnataka State Souharda Federal Co-operative Ltd. Reg. No. RSR/SOU/ACT/136/ Regn. 051/2001-02 dated: 04-01-2002 Bengaluru

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

* * *